# 8ನೆಯ ತರಗತಿ

# ಮೊದಲನೆಯ ಸಂಕಲನಾತ್ಮಕ ಮೌಲ್ಯಮಾಪನ – ಸೆಪ್ಟೆಂಬರ್ 2026

## ವಿಷಯ : ಪ್ರಥಮ ಭಾಷೆ – ಕನ್ನಡ

**ಸಮಯ : 1.30 ಗಂಟೆಗಳು** | **ಗರಿಷ್ಠ ಅಂಕಗಳು : 40**

---

**I. ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ :** **4 X 1 = 4**

1. ಮಣ್ಯ : ಹೂನ್ಯ :: ಕಾರ್ಯ : ________________

2. ಗಂಗಾ : ಅಂಕಿತನಾಮ :: ಪಂಡಿತ : ________________

3. ಮನೆಯಲ್ಲಿ : ಸಪ್ತಮೀ :: ಮನೆಯಿಂದ : ________________

4. ಹ್ರಸ್ವಸ್ವರಗಳು : ೬ :: ಅವರ್ಗೀಯ ವ್ಯಂಜನಗಳು : ________________

**II. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :** **3 X 1 = 3**

5. ಮಂತ್ರ ಪಠನೆಯ ಫಲ ಸಿಗಬೇಕೆಂದರೆ ಮನುಜ ಏನನ್ನು ಬಿಡಬೇಕು?

6. ರಾಜನಾದವನ ಕರ್ತವ್ಯವೇನು?

7. ಹೂಯಾನ್‌ತ್ಸಾಂಗ್ ಭರತಖಂಡಕ್ಕೆ ಏಕೆ ಬಂದನು?

**III. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** **4 X 2 = 8**

8. ನಾಗರೀಕತೆಯ ದೊಡ್ಡ ಅನಾಹುತಗಳಾಗಿ ಕಾಣಿಸಿಕೊಳ್ಳುತ್ತಿರುವ ಆಚರಣೆಗಳಾವುವು?

9. ಜಪ ಹಾಗೂ ಉಪವಾಸ ವ್ರತಗಳ ಫಲ ಹೇಗೆ ನಿಷ್ಫಲಗಳಾಗುತ್ತವೆ?

10. ಭಟ ಮತ್ತು ದ್ವಿಜರ ಲಕ್ಷಣಗಳಾವುವು?

11. ಬೂದಿಯನ್ನು ಕೊಳದಲ್ಲಿ ಬಿಡುವುದರಿಂದ ಹೇಗೆ ಬದುಕು ಧನ್ಯವಾಗುವುದು?

**IV. ಕೆಳಗಿನ ಕವಿ/ಸಾಹಿತಿಯ ಜನ್ಮಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ :** **1 X 3 = 3**

12. ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ

**V. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿ :** **1 X 3 = 3**

13. "ಸೀತೆಯ ಮುಖ ಕಮಲದಂತೆ ಅರಳಿತು"



Scanned with OKEN Scanner

**VI. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ :** **2 X 3 = 6**

14. "ನಿದ್ದೆಯಲಿ ಮುಳುಗಲಿನ್ನಾವ ಕನಸಿನ ಮೊಸಳೆ ಹಿಡಿಯುವುದೋ"

15. "ಖಗ ಮೃಗೋರಗಾಳಿಯೋ"

**VII. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ :** **1 X 4 = 4**

16. ನಾಡಿಗಾಗಿ____________________________

____________________________________

____________________________________

__________________________ಧೀರ ಪಯಣದಲ್ಲಿ

**VIII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** **1 X 4 = 4**

17. ಕರೀಮ ಧನವಂತನಾದ ಬಗೆ ಹೇಗೆ? ವಿವರಿಸಿ.

***ಅಥವಾ***

ರಹೀಮನಿಗೆ ಮಗ್ಗದ ಬಗ್ಗೆ ದ್ವೇಷ ಉಂಟಾಗಲು ಕಾರಣವಾದ ಅಂಶಗಳನ್ನು ಸಂಗ್ರಹಿಸಿ ಬರೆಯಿರಿ.

**IX. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ :** **1 X 5 = 5**

18. ನಿಮ್ಮನ್ನು ರಾಯಚೂರಿನ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ 'ಪರಿಮಳಾ' ಎಂದು ಭಾವಿಸಿಕೊಂಡು, ಸಹೋದರಿಯ ವಿವಾಹದ ಕಾರಣ ಎರಡು ದಿನಗಳ ರಜೆಯನ್ನು ಕೋರಿ ವರ್ಗಶಿಕ್ಷಕರಿಗೆ ಪತ್ರವನ್ನು ಬರೆಯಿರಿ.

**ಅಥವಾ**

ನಿಮ್ಮನ್ನು ಕಲ್ಬುರ್ಗಿಯ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ 'ದೇವರಾಜ' ಎಂದು ಭಾವಿಸಿಕೊಂಡು, ಶಾಲೆಯಲ್ಲಿ ನಡೆದ ವಲಯಮಟ್ಟದ ಕ್ರೀಡಾಕೂಟ ಕಾರ್ಯಕ್ರಮವನ್ನು ವಿವರಿಸಿ ಹಾಸನದ ಸರ್ಕಾರಿ ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ 'ರವಿ' ಎಂಬ ಹೆಸರಿನ ಗೆಳೆಯನಿಗೆ ಪತ್ರವನ್ನು ಬರೆಯಿರಿ.

* * * *



Scanned with OKEN Scanner